Sri H. K. VEERANNA GOWDH.—I have already answered this question. The instructions are that incomplete works should be completed and money will be made available and the claims are to be settled immediately and money is made available for that.

Sri A. R. KARISIDDAPPA.—Is it not a fact that a circular was issued to Assistant Engineers and Executive Engineers to stop all the incomplete works regarding rural communications ?

Sri H. K. VEERANNA GOWDH.—It is not correct. The works might have been stopped temporarily, but we shall take up those works and complete them.

1-30 P. M.

VEHICLES LYING IDLE IN GOVERNMENT ROAD TRANSPORT DEPARTMENT.

*Q.—724. Sri E. NARAYANA GOWDA (Bangarapet).—

Will the Government be pleased to state:—

(*a*) the number of new and old buses in the Government Road Transport Department that are lying idle for the last three years together with the reasons therefor ;

(*b*) whether it is a fact that six chassis are missing out of the new ones bought since the last two years and whether an enquiry has been held in the matter ?

A.— Sri K. F. PATIL (Minister for State Transport, Mining and Food).—

(*a*) No new vehicles are laying idle for the last three years. 10 old vehicles are not in use since 1st January 1957. These 10 vehicles are obsolete models. They are being converted in our workshop by selecting the best ones out of them and changing certain essentail assemblies.

(*b*) No.

ಶ್ರೀ ಇ. ನಾರಾಯಣ ಗೌಡ.—ಸರ್ಕಾರದ ಸಾರಿಗೆ ಇಲಾಖೆಯಲ್ಲಿ ಸುಮಾರು 150-200 ಬಸ್ಸುಗಳು ಸುಮಾರು 6 ತಿಂಗಳುಗಳಿಂದ ಉಪಯೋಗಕ್ಕೆ ಬಾರದೆ ವ್ಯರ್ಥವಾಗಿ ನಿಂತಿವೆ ಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ಕೆ. ಎಫ್. ಪಾಟೀಲ್.—ನೀವು ಕೇಳಿರುವ ಪ್ರಶ್ನೆ 6 ತಿಂಗಳುಗಳಿಂದೆಷ್ಟು ಎಂಬುದಲ್ಲ. ಕಳೆದ ಮೂರುವರ್ಷಗಳಿಂದ ಎಂಬುದಾಗಿ ಕೇಳಿದ್ದಾರೆ. ಅದಕ್ಕಾಗಿ ಉತ್ತರವಲ್ಲಿ 10 ಹಳೇ ವಾಹನಗಳು ಉಪಯೋಗದಲ್ಲಿರಲ್ಲವೆಂದು ಹೇಳಿದೆ.

ಶ್ರೀ ಇ. ನಾರಾಯಣ ಗೌಡ.—ಹಾಗಾದರೆ 6 ತಿಂಗಳುಗಳಿಂದೀಚೆಗೆ ಎಷ್ಟು ಬಸ್ಸುಗಳು ನಿಂತಿವೆ ?

ಶ್ರೀ ಕೆ. ಎಫ್. ಪಾಟೀಲ್.—ಮೂರುವರ್ಷಗಳಿಂದೀಚೆಗೆ ಒಟ್ಟು 185 ಬಸ್ಸುಗಳು.

ಶ್ರೀ ಇ. ನಾರಾಯಣ ಗೌಡ.—ಹಾಗಾದರೆ 1957ರಿಂದ 3-4 ವರ್ಷಗಳು ಕಳೆದರೂ ವ್ಯರ್ಥವಾಗಿ ಅಷ್ಟು ಬಸ್ಸುಗಳು ನಿಮ್ಮ ವರ್ಕ್‌ಷಾಪಿನಲ್ಲಿದ್ದು ಇದುವರೆಗೆ ರಿಪೇರಿ ಆಗದೆಯೇ ಇರುವುದರಿಂದ ಸರಿಯಾದ ರೀತಿಯಲ್ಲಿ ಅವು ಕೆಲಸಮಾಡುವಂತೆ ತಕ್ಕ ವ್ಯವಸ್ಥೆಮಾಡಲು ಇಷ್ಟು ಕಾಲಾವಕಾಶ ಸಾಕಾಗಲಿಲ್ಲವೇ ?

ಶ್ರೀ ಕೆ. ಎಫ್. ಪಾಟೀಲ್.—ನಮಗೆ ಕಾಲಕ್ಕೆ ಸರಿಯಾಗಿ ಸ್ಪೇರ್‌ಪಾರ್ಟ್ಸ್ ಬಾರದೇ ಇರುವುದರಿಂದ 10 ಬಸ್ಸುಗಳಲ್ಲಿ ಕೆಲವು ಇನ್ನೂ ರೀಪೇರಿಯಾಗಿಲ್ಲ ಮಿಕ್ಕ ವಾಹನಗಳೆಲ್ಲಾ ಜಾಗ್ರತೆ ಉಪಯೋಗಕ್ಕೆ ಬರುವಂತೆ ವರ್ಕ್‌ಷಾಪಿನವರು ಕೆಲಸಮಾಡುತ್ತಿದ್ದಾರೆ.

ಶ್ರೀ ಇ. ನಾರಾಯಣ ಗೌಡ.—ಲಕ್ಷಾಂತರ ರೂಪಾಯಿಗಳ ವ್ಯವಹಾರವನ್ನು ನಡೆಸತಕ್ಕ ವರ್ಕ್‌ಷಾಪಿನಲ್ಲಿ ಕೇವಲ ಕೆಲವು ಬಸ್ಸುಗಳಿಗೆ ಸ್ಪೇರ್‌ಪಾರ್ಟ್ಸ್ ತರಿಸುವುದಕ್ಕೆ ತೊಂದರೆಯಾಗಿದೆ ಎಂದರೇನು ? ಸ್ಪೇರ್‌ಪಾರ್ಟ್ಸ್ ಸಿಕ್ಕಲಿಲ್ಲವೆಂದರೆ ಹೇಗೆ ?

ಶ್ರೀ ಕೆ. ಎಫ್. ಪಾಟೀಲ್.—ಒಟ್ಟು ಈಗ 1,700 ಬಸ್ಸುಗಳ ರಿಪೇರಿಗಳು ಆಗಾಗ್ಗೆ ಆಗುತ್ತಿರುವಾಗ ಕೇವಲ 10 ಬಸ್ಸುಗಳ ಸ್ಪೇರ್‌ಪಾರ್ಟ್ಸ್ ಸಿಕ್ಕಲಿಲ್ಲವೆಂದು ಹೇಳಿದ ಮಾತ್ರಕ್ಕೆ ಇರಾಜೆ ಅದರಿಂದ ನಾ-ರಾಯಕ್ಕಾಗಿದೆಯೆಂದು ಹೇಳುವುದಕಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ 185 ಬಸ್ಸುಗಳನ್ನು ಯಾವರೀತಿ ರಿಪೇರಿ ಮಾಡುತ್ತಿದ್ದೀರಿ ?

ಶ್ರೀ ಕೆ. ಎಫ್. ಪಾಟೀಲ್.—ಆಗಾಗ್ಗೆ ಯಾವ ಯಾವ ಬಸ್ಸುಗಳನ್ನು ರಿಪೇರಿ ಮಾಡ ಬೇಕೋ ಆಯಾ ಬಸ್ಸುಗಳಿಗೆ ಸರಿಹೊಂದುವಂತ ಸ್ಪೇರ್‌ಪಾರ್ಟ್ಸ್‌ನ್ನು ಒದಗಿಸಿಕೊಂಡು ರಿಪೇರಿ ಮಾಡುತ್ತಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—185 ಬಸ್ಸುಗಳ ಪೈಕಿ ಎಷ್ಟು ಬಸ್ಸುಗಳನ್ನು ಹರಾಜು ಮಾಡಿದ್ದೀರಿ, ಎಷ್ಟು ಬಸ್ಸುಗಳನ್ನು ರಿಪೇರಿ ಮಾಡಿದ್ದೀರಿ ಮತ್ತು ಎಷ್ಟು ಬಸ್ಸುಗಳನ್ನು ರೋಡ್ ಮೇಲೆ ಹಾಕಿದ್ದೀರಿ ?

ಶ್ರೀ ಕೆ. ಎಫ್. ಪಾಟೀಲ್.—ಹರಾಜು ಹಾಕುವುದು ಬೇರೆ ಪ್ರಶ್ನೆ. ಮ್ಯಾಗ್ನಿಮಂ ಮೈಲೇಜ್ ಕೊಡದೇ ಇದ್ದುದನ್ನೆಲ್ಲಾ ರಿಪೇರಿ ಮಾಡಬೇಕಾಗಿದೆ. ಅದಕ್ಕಾಗಿ ಸ್ಪೇರ್ ಪಾರ್ಟ್ಸ್‌ನ್ನು ಸಂಬಂಧಪಟ್ಟ ಕಂಪೆನಿಗಳಿಂದ ತರಿಸಬೇಕಾಗಿದೆ. ನಮ್ಮಲ್ಲಿ ಹೊಬ್ಲಿ ವರ್ಕ್‌ಷಾಪ್ ಮತ್ತು ಇತರ ಬೇರೆ ಬೇರೆ ಸಣ್ಣ ಸಣ್ಣ ಡಿಪೋಗಳಲ್ಲಿ ರಿಪೇರಿ ಕೆಲಸ ನಡೆಯುತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—185 ಬಸ್ಸುಗಳ ಪೈಕಿ ಎಷ್ಟು ಬಸ್ಸುಗಳನ್ನು ಇದು ವರೆಗೆ ರಿಪೇರಿಮಾಡಿ ಉಪಯೋಗಕ್ಕೆ ಬರುವಂತೆ ರೋಡ್‌ಮೇಲೆ ಹಾಕಿದ್ದೀರಿ ?

ಶ್ರೀ ಕೆ. ಎಫ್. ಪಾಟೀಲ್.—185 ಬಸ್ಸುಗಳ ಪೈಕಿ ಈಗ ಬಹುಭಾಗ ರಿಪೇರಿ ಮಾಡಿ ರೋಡ್‌ಮೇಲೆ ಹಾಕಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—185 ಬಸ್ಸುಗಳಲ್ಲಿ ಎರಡು ಮಾಡಿದ್ದೀರೋ, ಮೂರು ಮಾಡಿದ್ದೀರೋ, ಸುಮ್ಮನೆ ಬಹುಭಾಗ ಎಂದು ಉತ್ತರ ಹೇಳುವುದು ಬಹುದೂರ ಹೋಗುತ್ತದೆ. ಅದಕ್ಕೋಸ್ಕರ ನಿಖರವಾಗಿ ಎಷ್ಟು ಬಸ್ಸುಗಳನ್ನು ರಿಪೇರಿ ಮಾಡಿದ್ದೀರಿ ?

ಶ್ರೀ ಕೆ. ಎಫ್. ಪಾಟೀಲ್.—ಈಗ ಕೆಲವು ಸ್ಪೇರ್‌ಪಾರ್ಟ್ಸ್‌ಗಳನ್ನು ಪಾರ್ಕ್ ಎಕ್ಸ್‌ಚೇಂಜ್‌ನಿಂದ ತರಿಸಿಕೊಂಡು ಕೆಲವು ಬಸ್ಸುಗಳನ್ನು ರಿಪೇರಿಮಾಡಿದ್ದೇವೆ. ಅದೂ ಅಲ್ಲದೆ ಸ್ಪೆಷಲ್ಲಾಗಿ ಆಡ್-ಹಾಕ್ ಕೋಟಾ ಅಪ್ಪನ್ನು ಪಾರ್ಕ್-ಎಕ್ಸ್‌ಚೇಂಜ್‌ನಿಂದ ತರಿಸಿಕೊಳ್ಳಲು ಆರ್ಡರ್ ಸಹ ಮಾಡಿದ್ದೇವೆ. ಎಲ್ಲವನ್ನೂ ರೋಡ್ ಮೇಲೆ ಹಾಕುವುದಕ್ಕೆ ಇನ್ನು 3 ತಿಂಗಳು ಬೇಕು.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.- ಸ್ಪೇರ್‌ಪಾರ್ಟ್ಸ್ ಎಲ್ಲಿಂದ ಬರಬೇಕು ?

ಶ್ರೀ ಕೆ. ಎಫ್. ಪಾಟೀಲ್.—ಮಾಲುಗಳು ಎಲ್ಲ ತಯಾರಾಗುತ್ತವೋ ಅಲ್ಲಿಂದಲೇ ಬರಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—185 ಬಸ್ಸುಗಳ ಪೈಕಿ ಎಷ್ಟು ಬಸ್ಸುಗಳಿಗೆ major portions of the engine ports ಬೇಕು, ಎಷ್ಟು ಬಸ್ಸುಗಳಿಗೆ ಹೆಡ್ ಬೇಕು, ಎಷ್ಟು ಬಸ್ಸುಗಳಿಗೆ ವಾಲ್ವ್ಸ್ ಬಾಲ್ ಬೇರಿಂಗ್ಸ್ ಮತ್ತು ಪಿಸ್ಟ್ರನ್ ಬೇಕು–ಹೀಗೆ ಏನೇನು ಸ್ಪೇರ್ ಪಾರ್ಟ್ಸ್‌ಗಳು ಬೇಕಾಗಿವೆ? What is the collasal money that he have invested?

ಶ್ರೀ ಕೆ. ಎಫ್. ಪಾಟೀಲ್.—ಏನೇನು ಬೇಕೆಂಬುದನ್ನು ತಿಳಿದೇ ಸ್ಪೇರ್‌ಪಾರ್ಟ್ಸ್‌ಗಳನ್ನು ತರಿಸುತ್ತಿದ್ದೇವೆ.

ಅಧ್ಯಕ್ಷರು.—ನೀವೇ ಹೋಗಿ ಅವನ್ನೆರ್ಲಾ ನೋಡಿಕೊಂಡು ಬಂದು ವರದಿಮಾಡಿ.

(ನಗು)

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಈಗ್ಗೆ 3 ವರ್ಷಗಳಿಂದಲೂ ಎಷ್ಟೋ ಹೊಸ ಬಸ್ಸುಗಳ ಚಾಸಿಸ್ ಗ್ಯೆರುವಿಲೆ ಆಗಿಪೆಯೆಂಬುದು ನಿಜವೇ?

ಶ್ರೀ ಕೆ. ಎಫ್. ಪಾಟೀಲ್.—ಇಲ್ಲ. ನನಗೆ ಬಂದಿರುವ ವರದಿ ಪ್ರಕಾರ ಹಾಗೇನೂ ಆಗಿಲ್ಲ.

CONSTRUCTION OF PRASANNA RAMESWARA TEMPLE AT BELAGUR.

*Q.—736. Sri B. S. SHANKARAPPA (Hosadurga).—

Will the Government be pleased to state :—

(*a*) whether it has come to their notice of the Government that the villagers of Belagur village in Hosadurga Taluk were directed by the Tahsildar on their petition as to remit Rs. 4,000 as contribution of the villagers to the Muzrai Funds to construct Sri Prasanna Rameswara Temple at Belagur ;

(*b*) whether it is not a fact that the villagers have remitted Rs. 4,000 on 15th October 1959 and received an endorsement stating that Deputy Commissioner has recomended to the higher authorities on 30th January 1961 ;

(*c*) if so, the action taken in this behalf ?

*A.—Sri KADIDAL MANJAPPA (Minister for Revenue).—

(*a*) and (*b*) Yes.

(*c*) The question is under consideration.

ಶ್ರೀ ಬಿ. ಎಸ್. ಶಂಕರಪ್ಪ.—ಈ ದೇವಸ್ಥಾನವನ್ನು ಕಟ್ಟುವುದಕ್ಕೆ ಅಂದಾಜು ಎಷ್ಟಾಗಿದೆ? ಗ್ರಾಮಸ್ಥರು ಕೊಟ್ಟಿರುವ ನಾಲ್ಕು ಸಾವಿರ ರೂಪಾಯಿಗಳ ಕಾಂಟ್ರಿಬ್ಯೂಷನ್ ಮುಜರಾಯಿ ನಿಧಿಗೆ ಜಮಾ ಮಾಡಿಲ್ಲವೇ?

†ಶ್ರೀ ಕಡಿದಾಳ್ ಮಂಜಪ್ಪ.—ಅಂದಾಜು 16 ಸಾವಿರ ರೂಪಾಯಿಗಳಾಗಿವೆ. ಗ್ರಾಮಸ್ಥರು ನಾಲ್ಕು ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಿದ್ದಾರೆಂದು ಉತ್ತರದಲ್ಲಿ ನಮೂದುಮಾಡಿದ್ದೇವೆ.

ಶ್ರೀ ಬಿ. ಎಸ್. ಶಂಕರಪ್ಪ.—ಹಾಗಾದರೆ ಅಂದಾಜು ತಯಾರಾದ ಮೇಲೆ ನನ್ನ (ಸಿ) ಪ್ರಶ್ನೆಗೆ ಉತ್ತರವಾಗಿ ಈ ವಿಷಯ ಪರ್ಯಾ ಲೋಚನೆಯಲ್ಲಿದೆ ಎಂದು ಹೇಳಿದೆ. ಗ್ರಾಮಸ್ಥರು